ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಸಚಿವರು).—

ಅ) ಅಂತಹ ಅಭಾವ ಕಂಡು ಬಂದಿಲ್ಲ.

ಆ) ತಲಾ ೧೩೫ ಲೀಟರ್ ನೀರು ಸರಬರಾಜು ಮಾಡಲು ಒಂದು ಅಭಿವೃದ್ಧಿ ಯೋಜನೆಯನ್ನು ರೂಪಿಸಿದೆ.

ಇ) ಯೋಜನೆಯ ಅಂದಾಜು ಮತ್ತು ನಕ್ಷೆಗಳನ್ನು ಈ ವರ್ಷದ ದರಗಳ ಮೇರೆಗೆ ಮಾರ್ಪಾಡು ಮಾಡಲಾಗುತ್ತಿದೆ.

ಶಹಬಾದ್ ಬಳಿ ಏನ್ಸಿಯಲರೀ ಕೈಗಾರಿಕಾ ಘಟಕ ಸ್ಥಾಪನೆಗೋಸ್ಕರವಾಗಿ ಭೂಸ್ವಾಧೀನ ಮಾಡಿಕೊಂಡ ಬಗ್ಗೆ

೭೪೯. ಶ್ರೀ ಕೆ. ಬಿ. ಶಾಣಪ್ಪ (ಶಹಬಾದ್).—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಂಕೂರು ಗ್ರಾಮದಲ್ಲಿ, ಶಹಬಾದ್ ಹತ್ತಿರ ಎಷ್ಟು ಎಕರೆ ಪ್ರದೇಶಗಳನ್ನು ಏನ್ಸಿಯಲರೀ ಕೈಗಾರಿಕಾ ಘಟಕ ಸ್ಥಾಪನೆಗೋಸ್ಕರವಾಗಿ ಭೂಸ್ವಾಧೀನ ಮಾಡಿಕೊಂಡಿದೆ.

ಆ) ಸರ್ವೆ ಕ್ರಮಾಂಕಗಳು ಮತ್ತು ಭೂಸ್ವಾಧೀನ ಮಾಡಿಕೊಂಡಿರುವ ಜಮೀನಿಗಾಗಿ ಪರಿಹಾರ ಧನ ಎಷ್ಟು.

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು).—

ಅ) ೨೪ ಎಕರೆ ೩೦ ಗುಂಟೆಗಳು

ಸರ್ವೆ ಕ್ರಮಾಂಕಗಳು

ಆ) ಳಳಖ-೧, ಳಳಖ-೨, ಳಳಖ-೩, ಳಳಖ-೪, ಳಳಖ-೫, ಳಳಖ-೬, ಳಳಖ-೭, ಳಳಖ-೮, ಳಳಖ-೮ಎ, ಳಳಖ-೮ಬಿ ಮತ್ತು ಳಳಲ.

ವಿತರಿಸಿದ ಪರಿಹಾರ ಧನ.

೧೩, ಳಳ೧-೧೫ ರೂ.ಗಳು

ಕೆ.ಜಿ.ಎಫ್‌ನಲ್ಲಿ ಸರ್ಕಾರದ ಸ್ವಾಮಿತ್ವದಲ್ಲಿರುವ ಕೈಗಾರಿಕೆಗಳು

೭೪೬. ಶ್ರೀ ಟಿ. ಎಸ್. ಮಣಿ (ಕೆ.ಜಿ.ಎಫ್.).—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ಸ್ವಾಮಿತ್ವದಲ್ಲಿರುವ ಕೆಜಿಎಫ್.ನಲ್ಲಿ ಯಾವುದಾದರೂ ಉದ್ದಿಮೆಗಳು ಇವೆಯೇ? ಇದ್ದಲ್ಲಿ ಅದರಲ್ಲಿರುವ ಕಾರ್ಮಿಕರುಗಳು ಎಷ್ಟು?

ಆ) ಕೆಜಿಎಫ್.ನಲ್ಲಿ ಖಾಸಗೀ ವಲಯದಲ್ಲಿರುವ ಕೈಗಾರಿಕೆಗಳು ಎಷ್ಟು? (ಯಾವ ಮಾದರಿ ಕಾರ್ಖಾನೆಗಳು ಮತ್ತು ಕಾರ್ಮಿಕರುಗಳು, ಸಂಖ್ಯೆ ಕೊಡುವುದು)

ಇ) ಕೆಲವೊಂದು ಗಣಿಗಳು ಮುಚ್ಚುವುದು ಮತ್ತು ಆಲ್ಲಿ ಕಾರ್ಮಿಕರಿಗೆ ಉದ್ಯೋಗದಿಂದ ದೂರ ಮಾಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಸರ್ಕಾರದವರು ಹೊಸ ಕೈಗಾರಿಕೆಗಳನ್ನು ಪ್ರಾರಂಭಿಸಿ ಕಾರ್ಮಿಕರಿಗೆ ಕೆಲಸವನ್ನು ಒದಗಿಸುವರೇ?

ಶ್ರೀ ಜೆ.ಹೆಚ್. ಪಟೇಲ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು).—

ಅ) ಇಲ್ಲ.

ಆ) ಕೈಗಾರಿಕೆಗಳ ಸಂಖ್ಯೆ ... ೧೩೦

ಕಾರ್ಮಿಕರ ಸಂಖ್ಯೆ ... ೯೨೯

ಈ ಕೆಳಕಂಡ ಮಾದರಿಯ ಕೈಗಾರಿಕೆಗಳು.—

ಎ. ವ್ಯವಸಾಯ ಆಧಾರಿತ

ಬಿ. ರಾಸಾಯನಿಕ ಆಧಾರಿತ

ಸಿ. ಅರಣ್ಯ

ಡಿ. ಜಹಳಿ

ಇ. ಆಫ್‌ಸೆಟ್ ಮುದ್ರಣ

ಎಫ್. ಮುದ್ರಣಾಲಯ

ಜಿ. ಸ್ಕ್ರೀನ್ ಪ್ರಿಂಟಿಂಗ್

ಹೆಚ್. ಕಲ್ಲು ಪಾಲಿಷ್

ಐ. ಮೊಸಾಯಿಕ್ ಟೈಲ್ಸ್

ಜೆ. ಮೇಣದ ಬತ್ತಿ

ಕೆ. ಚರ್ಮದ ವಸ್ತ್ರಗಳು

ಎಲ್. ಹುಣಸೇಕಾಳು ಪುಡಿ

ಎಂ. ಚಿನ್ನದ ಆಭರಣಗಳು

ಎನ್. ಕಾಗದ ಕಾರ್ಡ್‌ಬೋರ್ಡ್

ಓ. ಡ್ರೈ ಕ್ಲೀನಿಂಗ್

ಪಿ. ಬೆಂಕಿಪಟ್ಟಣ

ಇ) ಇಲ್ಲ.

ಈ) ಇಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಹದಿಮೂರನೆಯ ಪಟ್ಟಿಯಲ್ಲಿದ್ದಂತೆ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರವನ್ನು ಸಭೆಯ ಮುಂದೆ ಇಡುತ್ತಿದ್ದೇನೆ.

ರೇಷ್ಮೆ ಗೂಡಿನ ಮಾರುಕಟ್ಟೆ ಸ್ಥಾಪಿಸುವ ಮತ್ತು ಕಟ್ಟಡಗಳನ್ನು ಕಟ್ಟಿ ಕೊಡುವುದರ ಬಗ್ಗೆ

೪೨. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ರೇಷ್ಮೆ ಖಾತೆಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಎಷ್ಟು ಹೆಕ್ಟಾರ್ಸ್ ಜಮೀನುಗಳಲ್ಲಿ ರೇಷ್ಮೆ ಬೆಳೆಯಿದೆ ಹಾಗೂ ರೇಷ್ಮೆ ಗೂಡಿನ ಉತ್ಪಾದನೆ ಎಷ್ಟು ;

ಆ) ಈ ಜಿಲ್ಲೆಗಳಲ್ಲಿ ತಾಲೂಕಾವಾರು ಬೆಳೆ ಮತ್ತು ಉತ್ಪಾದನೆ ಎಷ್ಟು :